**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ಹೊಸದುರ್ಗ.**

**ಅಸಲು ದಾವಾ ಸಂಖ್ಯೆ.233/2022**
**ವಾ.ಸಾ-1**

**ಸಾಕ್ಷಿಗೆ ದಿನಾಂಕಃ 12-7-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಶ್ರೀ ಡಿ ಎನ್ ಎಂ ಪ್ರತಿವಾದಿಯರ ಪರ ವಕೀಲರಿಂದ**

1. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಮತ್ತು ವಾದಿ ಸಿದ್ದೇಶ್ ರವರ ವಿವಾಹ 2011 ರಲ್ಲಿ ಆಗಿರುತ್ತದೆ. 2011 ರಿಂದ ಈವರೆಗೆ ನಾನು ಮತ್ತು ವಾದಿ ಸಾಂಸಾರಿಕ ಜೀವನ ನಡೆಸುತ್ತಾ ಬಂದಿದ್ದೇವೆ ಎಂದರೆ ಸರಿ. ವಾದಿಯ ಮನೆತನದ ವ್ಯವಹಾರವನ್ನು ಅವರ ತಾಯಿ ನಾಗಮ್ಮ ಎಂಬುವವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಸದರಿ ತಾಯಿ ತೀರಿಕೊಂಡ ನಂತರ ಮನೆತನದ ವ್ಯವಹಾರವನ್ನು ವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ನೋಡಿಕೊಳ್ಳುತ್ತಿದ್ದೆ ಎಂದು ನುಡಿಯುವರು.

2. ವಾದಿಯ ತಾಯಿಯ ಮರಣಾನಂತರ ನಾನು ಮನೆತನದ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದು ವಾದಿಯ ವಿರುದ್ಧ ಅಥವಾ ವಾದಿಗೆ ಸಂಬಂಧಿಸಿದಂತೆ ಹೊಸದುರ್ಗ ನ್ಯಾಯಾಲಯದಲ್ಲಿ ಇದ್ದ ಪ್ರಕರಣಗಳ ಬಗ್ಗೆ ತಿಳಿದುಕೊಂಡಿದ್ದೇನೆ. ವಾದಿಯು ಅವರ ತಾಯಿಯ ಮರಣಾನಂತರ ಅಸಲು ದಾವಾ ಸಂಖ್ಯೆ 81/2019 ರಂತೆ ಹೊಸದುರ್ಗ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಬಸವರಾಜ ಎಂಬ ವಕೀಲರನ್ನು ನೇಮಿಸಿದ್ದರು ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿಯು ಮುಂದುವರೆದು ನನ್ನ ಗಂಡ ತೋಟಕ್ಕೆ ಹೋಗುತ್ತೇನೆ ಎಂದು ಹೇಳಿ ಹೋಗುತ್ತಿದ್ದರು. ನಂತರ ಸದರಿ ಬಸವರಾಜ ಎಂಬ  ವಕೀಲರಿಂದ ಕಡತವನ್ನು

**ಅಸಲು ದಾವಾ ಸಂಖ್ಯೆ.233/2022**
**ವಾ.ಸಾ-1**

ಹಿಂಪಡೆದು ಪ್ರಸ್ತುತ ಕಡೂರಿನ ವಕೀಲರ ಕಡೆಯಿಂದ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸಾಕ್ಷಿಯು ದಾವೆಯ ಬಗ್ಗೆ ಏನೂ ಗೊತ್ತಿರಲಿಲ್ಲ ಆದ್ದರಿಂದ ದಾವೆಯಲ್ಲಿ ಪ್ರಸ್ತುತ ದಾವೆಯ ವಕೀಲರನ್ನು ನೇಮಿಸಿದ್ದೆವು ಎಂದು ನುಡಿಯುವರು.

3. ಅಸಲು ದಾವಾ ಸಂಖ್ಯೆ 81/2019 ರಲ್ಲಿ ಇದೇ ದಾವೆಯಲ್ಲಿನ ವಕೀಲರನ್ನು ನೇಮಿಸುವ ಕಾಲಕ್ಕೆ ವಾದಿಯು ಮಾನಸಿಕ ಅಸ್ವಸ್ಥ ಎಂದು ಆತನ ಪಾಲನ ಕರ್ತನ ಮೂಲಕ ದಾವೆ ನಡೆಸಲು ಅರ್ಜಿ ಸಲ್ಲಿಸಿಲ್ಲ. ಸಾಕ್ಷಿಯು ಮುಂದುವರೆದು ಆಗ ದಾವೆ ಮುಗಿದು ಹೋಗಿತ್ತು ಎಂದು ನುಡಿಯುವರು.

**ಈ ಹಂತದಲ್ಲಿ ಸಾಕ್ಷಿಯ ಸ್ವ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ. ನನ್ನ ಸಮಕ್ಷಮ

**ಪ್ರಧಾನ ಸಿವ್ಹಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**